# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 418 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15.09.2022 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಡಪ್ರಭು ಕೆಂಪೇಗೌಡ ಬಡಾವಣೆ ಅಭಿವೃದ್ಧಿಯಲ್ಲಿ ರೈತರಿಂದ ಭೂಮಿಯನ್ನು 40:60 ರ ಅನುಪಾತದಲ್ಲಿ ಸ್ವಾಧೀನ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ವಿವರ ನೀಡುವುದು) | ಹೌದು.<br><br>ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಸಂಬಂಧಿಸಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಬಿಡಿಎ/ಆಯುಕ್ತರು/ಡಿಸಿ(ಎಲ್ಎ)/ಎಎಲ್ಎಓ/158/2008-09, ದಿನಾಂಕ:21.05.2008 ನ್ನು ಮತ್ತು ಸರ್ಕಾರದಿಂದ ಅಂತಿಮ ಅಧಿಸೂಚನೆ ಸಂಖ್ಯೆ:ಯುಡಿಡಿ/51/ಎಂಎನ್ಎಕ್ಸ್/2010, ದಿನಾಂಕ: 18.02.2010 ನ್ನು ಹೊರಡಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ:ನಅಇ/53/ಬೆಂಭೂಸ್ವಾ/2011, ದಿನಾಂಕ: 11.08.2011 ರಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಭೂಪರಿಹಾರವಾಗಿ ನೂತನ ಬಡಾವಣೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗುವ ಪ್ರತಿ ಎಕರೆ ಜಮೀನಿಗೆ ಶೇಕಡ 45 ರಷ್ಟು ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟು ಉಳಿಕೆ ಶೇಕಡ 55 ರಷ್ಟು ವಸತಿ ನಿವೇಶನಗಳನ್ನಾಗಿ ವಿಂಗಡಿಸಿ ಪ್ರತಿ ಎಕರೆಗೆ ಶೇಕಡ 60:40 ರ ಅನ್ವಯ ಭೂಮಾಲೀಕರಿಗೆ ಶೇಕಡ 40 ರಷ್ಟು ಅಂದರೆ ಪ್ರತಿ ಎಕರೆಗೆ 9,583 ಚ.ಅಡಿ ಅಭಿವೃದ್ಧಿಪಡಿಸಿದ ನಿವೇಶನವನ್ನು ನೀಡಲು ಅಥವಾ ಪರಿಹಾರ ಧನವನ್ನು ನೀಡಲು ಆದೇಶಿಸಲಾಗಿದೆ. |
| ಆ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರೈತರಿಂದ ಒಂದು ದಶಕದ ಹಿಂದೆ ಭೂಸ್ವಾಧೀನ ಮಾಡಿಕೊಂಡಿದ್ದರೂ ಬಡಾವಣೆ ಅಭಿವೃದ್ಧಿಪಡಿಸಿ, ಜಮೀನಿನ ಭೂಮಾಲೀಕರಿಗೆ ನಿವೇಶನಗಳನ್ನು ನೋಂದಣಿ ಮಾಡಿಕೊಡುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ವಿವರ ನೀಡುವುದು) | ಭೂಸ್ವಾಧೀನಕ್ಕೆ ಒಳಪಟ್ಟ ಜಮೀನಿನ ಭೂಮಾಲೀಕರಿಗೆ 2017ನೇ ಸಾಲಿನಿಂದ ಪರಿಹಾರ ರೂಪವಾಗಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೋಂದಣಿ ಮಾಡಲಾಗಿರುತ್ತದೆ. ನೋಂದಣಿ ಮಾಡಲಾಗಿರುವ ನಿವೇಶನಗಳ ಅಳತೆಗಳ ವಿವರ ಕೆಳಕಂಡಂತಿದೆ:-<br>1. 6x9 ಮೀ. - 1434<br>2. 9x12 ಮೀ. - 3964<br>3. 12x18 ಮೀ. - 733<br>4. 15x24 ಮೀ. - 551<br>ಒಟ್ಟು 6682 |

| | | |
|---|---|---|
| ಇ) | ನಾಡಪ್ರಭು ಕೆಂಪೇಗೌಡ ಬಡಾವಣೆಯ ಸೂಲಿಕೆರೆ ಗ್ರಾಮದ ಬ್ಲಾಕ್-8 ರಲ್ಲಿ ಭೂಮಾಲೀಕರಿಂದ ವಶಪಡಿಸಿಕೊಂಡ ಜಮೀನಿನ ಬದಲಿಗೆ 40:60 ಅನುಪಾತದಲ್ಲಿ ನಿವೇಶನವನ್ನು ನೋಂದಣಿ ಮಾಡಿಕೊಡುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ; (ಪೂರ್ಣ ವಿವರ ನೀಡುವುದು) | ಸೂಲಿಕೆರೆ ಗ್ರಾಮದ ಬ್ಲಾಕ್-8ರಲ್ಲಿ ಭೂಸ್ವಾಧೀನ[illegible] ಭೂಮಾಲೀಕರಿಗೆ ನೋಂದಣಿ ಮಾಡಲಾಗಿರುವ ನಿವೇಶನಗಳ ಅಳತೆಗಳ ವಿವರ ಕೆಳಕಂಡಂತಿದೆ:-<br>1. 6x9 ಮೀ. - 00<br>2. 9x12 ಮೀ. - 194<br>3. 12x18 ಮೀ. - 125<br>4. 15x24 ಮೀ. - 36<br>**ಒಟ್ಟು 355**<br>39 ಪ್ರಕರಣಗಳು ನೋಂದಣಿಗಾಗಿ ಬಾಕಿಯಿರುತ್ತವೆ. |
| ಈ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸೂಲಿಕೆರೆ ಗ್ರಾಮದ ಸ.ನಂ. 14/2 ರಲ್ಲಿ 0.25ಗುಂಟೆ (ಕಂಪ್ಯೂಟರ್ ನಂ:112550) 14/2 ರಲ್ಲಿ 0.27ಗುಂಟೆ, (ಕಂಪ್ಯೂಟರ್ ಸಂ: 112553) 14/2 ರಲ್ಲಿ 0.26ಗುಂಟೆ, (ಕಂಪ್ಯೂಟರ್ ಸಂ 112549) ಭೂಸ್ವಾಧೀನ ಮಾಡಿಕೊಂಡ ಭೂಮಿಗೆ ಪರಿಹಾರವಾಗಿ ನಿವೇಶನವನ್ನು ಹಂಚಿಕೆ ಮಾಡಲು ಕಳೆದ 5 ವರ್ಷಗಳಿಂದ ಅರ್ಜಿ ಸ್ವೀಕರಿಸಿದ್ದರೂ, ಇದುವರೆಗೂ ರೈತರಿಗೆ ನಿವೇಶನ ಹಂಚಿಕೆ ಮಾಡದಿರಲು ಕಾರಣವೇನು? (ಈ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ಹೆಸರು, ಹುದ್ದೆ ಒಳಗೊಂಡಂತೆ ಪೂರ್ಣ ವಿವರ ನೀಡುವುದು ಮತ್ತು ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸಿರುವುದರ ಮಾಹಿತಿ ನೀಡುವುದು) | ಸೂಲಿಕೆರೆ ಗ್ರಾಮದ ಸರ್ವೆ ನಂ 14/2 ರಲ್ಲಿನ 0.24ಗುಂಟೆ ಜಮೀನಿಗೆ ಸಂಬಂಧಿಸಿದಂತೆ 40:60 ಅನುಪಾತದಲ್ಲಿ ಶ್ರೀ ಹೆಚ್.ಕೆ.ಜವರೇಗೌಡ ಬಿನ್ ಕಾಳೇಗೌಡ ರವರಿಗೆ ಅಭಿವೃದ್ಧಿಪಡಿಸಿದ 5,750 ಚ.ಅಡಿ ಜಾಗವನ್ನು, ಸೂಲಿಕೆರೆ ಗ್ರಾಮದ ಸರ್ವೆ ನಂ 14/2 ರಲ್ಲಿನ 0.26ಗುಂಟೆ ಜಮೀನಿಗೆ ಸಂಬಂಧಿಸಿದಂತೆ 40:60 ಅನುಪಾತದಲ್ಲಿ ಶ್ರೀ ಲಿಂಗರಾಜು ಬಿನ್ ಶ್ರೀ ರಾಮಕೃಷ್ಣಪ್ಪ ರವರಿಗೆ ಅಭಿವೃದ್ಧಿಪಡಿಸಿದ 6,229 ಚ.ಅಡಿ ಜಾಗವನ್ನು ಹಾಗೂ ಸೂಲಿಕೆರೆ ಗ್ರಾಮದ ಸರ್ವೆ ನಂ 14/2 ರಲ್ಲಿನ 0.27ಗುಂಟೆ ಜಮೀನಿಗೆ ಸಂಬಂಧಿಸಿದಂತೆ 40:60 ಅನುಪಾತದಲ್ಲಿ ಶ್ರೀ ಲಿಂಗರಾಜು ಬಿನ್ ಶ್ರೀ ರಾಮಕೃಷ್ಣಪ್ಪ ಇವರಿಗೆ ಅಭಿವೃದ್ಧಿಪಡಿಸಿದ 6,469 ಚ.ಅಡಿ ಜಾಗವನ್ನು ಹಂಚಿಕೆ ಮಾಡಲು ಪ್ರಾಧಿಕಾರದ ಅಪರ ಭೂಸ್ವಾಧೀನಾಧಿಕಾರಿಗಳು ನಡವಳಿಯ ಮೂಲಕ ಆದೇಶಿಸಿರುತ್ತಾರೆ.<br><br>ಸದರಿ ಭೂಮಾಲೀಕರುಗಳು ಮನವಿ ಸಲ್ಲಿಸಿ ಸೂಲಿಕೆರೆ ಗ್ರಾಮದ ಸರ್ವೆ ನಂ.8 ಮತ್ತು 63ರಲ್ಲಿ ರಚಿಸಿರುವ ಒಟ್ಟು ಏಳು ನಿವೇಶನಗಳನ್ನು ಹಂಚಿಕೆ ಮಾಡಲು ಮನವಿ ಸಲ್ಲಿಸಿರುತ್ತಾರೆ. ಆದರೆ, ಸೂಲಿಕೆರೆ ಗ್ರಾಮದ ಸರ್ವೆ ನಂ.8ರ ಮೇಲೆ ಓ.ಎಸ್.ನಂ.317/18, 759/20 ಹಾಗೂ ಡಬ್ಲ್ಯೂ.ಎ.ನಂ.251/22, ಡಬ್ಲ್ಯೂ.ಪಿ.ನಂ.8296/21, 13284/2022, 1377/17 ಹಾಗೂ 1382/17 ರಲ್ಲಿ ದಾವೆಗಳು ಇನ್ನು ಇತ್ಯರ್ಥವಾಗದೇ ಬಾಕಿಯಿರುವುದರಿಂದ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.<br><br>ಆದಕಾರಣ, ಸೂಲಿಕೆರೆ ಗ್ರಾಮದ ಸರ್ವೆ ನಂ.8ರಲ್ಲಿ ರಚಿಸಿರುವ ಮೂರು ನಿವೇಶನಗಳನ್ನು ಹೊರತುಪಡಿಸಿ ಇದೇ ಗ್ರಾಮದ ಸರ್ವೆ ನಂ.63ರಲ್ಲಿ ರಚಿಸಿರುವ ನಾಲ್ಕು ನಿವೇಶನಗಳ ಮೇಲೆ ಯಾವುದೇ ದಾವೆಗಳು ಇಲ್ಲದ ಕಾರಣ ಈ ನಿವೇಶನಗಳನ್ನು ಹಂಚಿಕೆ ಮಾಡಿ ನೋಂದಾಯಿಸಲು ಕ್ರಮತೆಗೆದುಕೊಳ್ಳಲಾಗುವುದು.<br><br>ಸೂಲಿಕೆರೆ ಗ್ರಾಮದ ಸರ್ವೆ ನಂ.8ರ ಬದಲಿಗೆ ಬೇರೆ ಸರ್ವೆ ನಂಬರ್ ಗಳಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಭೂಮಾಲೀಕರು ಇಚ್ಛಿಸಿದಲ್ಲಿ ಲಭ್ಯತೆಯ ಆಧಾರದ ಮೇಲೆ ನಿವೇಶನಗಳನ್ನು ನಿಯಮಾನುಸಾರ ಹಂಚಿಕೆ ಮಾಡಲು ಕ್ರಮತೆಗೆದುಕೊಳ್ಳಲಾಗುವುದು. |

ಸಂಖ್ಯೆ: ನಅಇ 316 ಬೆಂಭೂಸ್ವಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ